OS No. 35/2023

DW-1

**(ಇಂದು ದಿಃ 19-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ. ಪಿ ಕೆ ವಕೀಲರಿಂದಃ-</u>**

ನನಗೆ 4 ಜನ ಸೋಹದರರು, ಇಬ್ಬರು ಸಹೋದರಿಯರು. ವಾದಿ ಕೊನಯವಳು. ವಾದಿ ಮದುವೆಯಾಗಿ ಅಂದಾಜು 20 ವರ್ಷ ಆಗಿದೆ. ನನ್ನ ತಂದೆಯ ತಮ್ಮ ಇದ್ದರು. ನನ್ನ ತಂದೆಯ ಭಾಗಕ್ಕೆ ಸರ್ವೆ ನಂಬರ 8 ಮತ್ತು 26 ಜಮೀನುಗಳು ಬಂದಿವೆ. ಸರ್ವೆ ನಂಬರ 8ರಲ್ಲಿ ನನ್ನ ತಂದೆ ಭಾಗಕ್ಕೆ 8 ಎಕರೆ ಜಮೀನು ಬಂದಿತ್ತು. ಸರ್ವೆ ನಂಬರ 26ರಲ್ಲಿ 7 ಎಕರೆ 16 ಗುಂಟೆ ಜಮೀನು ಬಂದಿತ್ತು. ಸರ್ವೆ ನಂಬರ 8ರಲ್ಲಿ 5 ಎಕರೆ 10 ಗುಂಟೆ ಜಮೀನನ್ನು ರೈಲ್ವೆ ಇಲಾಖೆಯವರು ಸುಮಾರು 30ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಜಮೀನಿಗೆ ಪರಿಹಾರ ಬಂದಿದೆ ಎಂದರೆ ಸರಿ. ರೂ.40,000/- ಪರಿಹಾರ ಬಂದಿತ್ತು. 2 ಕಂತಿನಲ್ಲಿ ಬಂದಿತ್ತು. ವಾದಿ ಮದುವೆಯಾದಾಗ ನಾವು ಎಲ್ಲಾ ಅಣ್ಣ-ತಮ್ಮಂದಿರು ಒಂದೇ ಮನೆಯಲ್ಲಿ ವಾಸ ಇದ್ದೇವು ಎಂದರೆ ಶರಣಪ್ಪ ಮಹಾದೇವಪ್ಪ ಮತ್ತು ನಾನು ಒಟ್ಟಿಗೆ ಇದ್ದೇವು. ಇನ್ನಿಬ್ಬರು ಬೇರೆ ಕಡೆ ವಾಸವಾಗಿದ್ದರು. ಮನೆ ಚಿಕ್ಕದಾಗಿತ್ತು ಕಾರಣ ಇಬ್ಬರು ಬೇರೆ ಕಡೆ ವಾಸ ಇರುತ್ತಿದ್ದರು ಎಂದರೆ ಸರಿ. ನಾವು ವಿಭಾಗ ಆಗಿರಲಿಲ್ಲ, ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದೇವು ಎಂದರೆ ಸರಿ. 5ಜನ ಅಣ್ಣ-ತಮ್ಮಂದಿರು ವ್ಯವಸಾಯ ಮತ್ತು ಕೂಲಿ ಕೆಲಸ ಮಾಡುತ್ತೇವೆ. ನಮ್ಮ ಮನೆಯಲ್ಲಿ ಒಟ್ಟು 10-12 ಜನ ಇದ್ದೇವು. ನಮ್ಮ ಕುಟುಂಬಕ್ಕೆ ಒಂದು ವರ್ಷಕ್ಕೆ ಅಂದಾಜು 30 ಸಾವಿರ ಆದಾಯ ಬರುತ್ತದೆ. ಸದರಿ ಆದಾಯದಲ್ಲಿ ಮನೆ ನಡೆಸುವುದು ಕಷ್ಟ ಆಗುತ್ತಿತ್ತು ಎಂದರೆ ಸರಿ. ಸರ್ವೆ ನಂಬರ 8ರಲ್ಲಿ ಸ್ವಾಧೀನಗೊಂಡಿದ ಜಮೀನಿನ ಪರಿಹಾರ ಬಂದ ಹಣದಿಂದ ಸರ್ವೆ ನಂಬರ 691 ಮತ್ತು 799 ಎ ಗಳನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ, ನಮ್ಮ ಕುಟುಂಬದ ಆದಾಯದಿಂದ ಮಾತ್ರ ಜಮೀನು ಖರೀದಿ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ

ಸರ್ವೆ ನಂಬರ 8ರಲ್ಲಿ ಭಾಗ ಆಗದೆ ಇದ್ದರು ಕೂಡ ಭಾಗ ಮಾಡಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸರ್ವೆ ನಂಬರ 8ರಲ್ಲಿ 30ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದೇವೆ. ಆ ಬಗ್ಗೆ ವಿಭಾಗ ಪತ್ರ ಆಗಿಲ್ಲ, ವಿಭಾಗ ಆಗಿದೆ ಎಂದು ತೋರಿಸಲು

ದಾಖಲಾತಿ ಹಾಜರು ಪಡಿಸಿಲ್ಲ. ಸರ್ವೆ ನಂಬರ 8ರಲ್ಲಿನ ಜಮೀನನ್ನು ಭೂ ಪರಿವರ್ತನೆ ಮಾಡಿಸಿದ್ದೇವೆ. ಅದರಲ್ಲಿ 60 ಪ್ಲಾಟ ಆಗಿವೆ ಎಂದರೆ ಸರಿ. 5 ಜನ ಅಣ್ಣ ತಮ್ಮಂದಿರು ತಲಾ 12 ಪ್ಲಾಟುಗಳನ್ನು ಹಂಚಿಕೊಂಡಿದ್ದೇವೆ ಎಂದರೆ ಸರಿ. ಈ ಬಗ್ಗೆ ದಿನಾಂಕಃ18-01-2010ರಂದು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ 1, 3 ಮತ್ತು 5ನೇ ಪ್ರತಿವಾದಿಯರ ಹೆಸರಿನಲ್ಲಿ ತಲಾ ಒಂದು ಎಕರೆ ಜಮೀನು ಅವರುಗಳ ಹೆಸರುಗಳಲ್ಲಿ ಹೆಸರಿಗೆ ಮಾತ್ರ ಇದ್ದು ಅವುಗಳಲ್ಲಿ 5 ಜನರಿಗೆ ಭಾಗ ಇದೆ ಎಂದು ಹೇಳಿ ಬರೆಸಿದ್ದೇವೆ ಎಂದರೆ ಸರಿ. ವಿಭಾಗ ಪತ್ರ ಮಾಡಿಕೊಳ್ಳುವ ಸಂಗತಿಯನ್ನು ವಾದಿಗೆ ತಿಳಿಸದೆ ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಅವಳಿಗೆ ವಿಭಾಗ ಪತ್ರದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಆಗದೆ ಇದ್ದರೂ ಕೂಡಾ ವಾದಿಗೆ ಭಾಗ ಕೊಡಬಾರದು ಎಂದು ಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**